**ಆಶ್ರಯ ಯೋಜನೆಯಲ್ಲಿ ಗುರುತಿಸಿರುವ ಫಲಾನುಭವಿಗಳು.**

104 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) 1993ನೇ ಮಾರ್ಚ್ ಅಖೈರುವರೆಗೆ ಆಶ್ರಯ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)*

*ಆ) ಈ ಯೋಜನೆಯಲ್ಲಿ ನಿವೇಶನವನ್ನು ಹಂಚಲು ಸರ್ಕಾರಿ ಜಮೀನು ಅಲ್ಲದೆ ಖಾಸಗಿ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ (ತಾಲ್ಲೂಕುವಾರು ವಿವರ ಬೇಕು);*

*ಇ) ಸ್ವಾಧೀನ ಪಡಿಸಿಕೊಂಡ ಜಮೀನಿನ ಮಾಲಿಕರಿಗೆ ಪರಿಹಾರ ನೀಡಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)*

**ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು):**

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಫಲಾನುಭವಿಗಳ ಒಟ್ಟು ಸಂಖ್ಯೆ 7820.

ತಾಲ್ಲೂಕುವಾರು ವಿವರ ಈ ಕೆಳಗಿನಂತೆ ಇದೆ.

| ತಾಲ್ಲೂಕುಗಳ ಹೆಸರು | | ಗುರುತಿಸಲಾದ ಫಲಾನುಭವಿಗಳ ಸಂಖ್ಯೆ | | | |
|---|---|---|---|---|---|
| | | ಪ.ಜಾತಿ | ಪ.ಪಂಗಡ | ಇತರರು | ಒಟ್ಟು |
| 1. | ಕುಂದಾಪುರ | 8 | 7 | 205 | 220 |
| 2. | ಉಡುಪಿ | 224 | 64 | 1804 | 2092 |
| 3. | ಕಾರ್ಕಳ | 28 | 9 | 36 | 73 |
| 4. | ಪುತ್ತೂರು | 132 | 42 | 218 | 392 |
| 5. | ಸುಳ್ಯಾ | 135 | 107 | 286 | 528 |
| 6. | ಬೆಳ್ತಂಗಡಿ | 34 | 46 | 868 | 948 |
| 7. | ಬಂಟ್ವಾಳ | 169 | 127 | 1488 | 1784 |
| 8. | ಮಂಗಳೂರು | 214 | 32 | 1537 | 1783 |
| | ಒಟ್ಟು | 944 | 434 | 6442 | 7820 |

ಆ) ಗ್ರಾಮೀಣ ಪ್ರದೇಶಗಳಲ್ಲಿ ಖಾಸಗೀ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ನಗರ ಪ್ರದೇಶದಲ್ಲಿ ಕುಂದಾಪುರ ಪುರಸಭೆವ್ಯಾಪ್ತಿಯ ನಿವೇಶನದ ಜೊತೆಗೆ ವಡೇರಹೋಬಳಿ ಗ್ರಾಮದಲ್ಲಿ 3 ಎಕರೆ 29 ಗುಂಟೆ ಖಾಸಗೀ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು, ಕಬ್ಜಾವನ್ನು ಕೂಡ ಪುರಸಭೆ ಕುಂದಾಪುರಕ್ಕೆ ನಿವೇಶನ ಹಂಚಲು ಒಪ್ಪಿರುತ್ತದೆ. ಅಲ್ಲದೆ, ಈ ಬಾಬ್ತು ಕುಂದಾಪುರ ಉಪ ವಿಭಾಗಾಧಿಕಾರಿಗಳಲ್ಲಿ 2,76,346 ರೂ.ಗಳನ್ನು ಠೇವಣಿ ಮಾಡಲಾಗಿದೆ. ಆದರೆ ಪುರಸಭೆ ಕುಂದಾಪುರದವರಲ್ಲಿ ಹೆಚ್ಚುವರಿ 53,000 ರೂ. ವಂತಿಗೆಯನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಿರುವುದಿಲ್ಲ.

ಇ) ಇಲ್ಲ.

**ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ ಹಣ ಬಿಡುಗಡೆ.**

95 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?